# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ

## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-17

Cw- 39

| | |
|---|---|
| ಸಾಕ್ಷಿದಾರರ ಹೆಸರುಃ | ವಿಜಯಕುಮಾರ್ ಸಂತೋಷ |
| ತಂದೆ/ಗಂಡನ ಹೆಸರುಃ | ಮಾಯಪ್ಪ |
| ವಯಸ್ಸುಃ | 60 ವರ್ಷ |
| ಉದ್ಯೋಗಃ | ಎಎಸ್ಪಿ |
| ವಾಸ ಸ್ಥಳಃ | ದಾವಣಗೆರೆ |

**ದಿನಾಂಕ:06.12.2024 ರಂದು ಸಾಕ್ಷಿ ಹಾಜರಿದ್ದು , ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕಃ14.10.2019 ರಿಂದ 30.03.2021 ರವರೆಗೆ ಹಾವೇರಿ ಉಪ ವಿಭಾಗದ ಡಿವೈಎಸ್ಪಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 17.03.2021 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-38 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿದೆನು. ಎಸ್ಪಿಯವರ ಆದೇಶದ ಮೇರೆಗೆ ಪ್ರಕರಣದಲ್ಲಿ ಎಸ್.ಸಿ/ ಎಸ್,ಟಿ ಕಾಯಿದೆ ಬರುವುದರಿಂದ ತನಿಖೆ ಮುಂದುವರಿಸಿದೆನು. ಸದರಿ ಪ್ರಕರಣದಲ್ಲಿ ಆರೋಪಿಗಳನ್ನು ಚಾಸಾ-38 ರವರು ಶಹರ ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿದ್ದು ವಿಚಾರಣೆ ಮಾಡಿ ಆರೋಪಿಗಳ ಸ್ವ ಇಚ್ಛಾ ಹೇಳಿಕೆಗಳನ್ನು ಮಾಡಿಕೊಂಡೆನು. ಸ್ವ ಇಚ್ಛಾ ಹೇಳಿಕೆಯನ್ನು ನಿಪಿ-62, 63 ಎಂದು, ಸಾಕ್ಷಿ ಸಹಿ ನಿಪಿ-62(ಎ), ನಿಪಿ-63(ಎ) ಅಂತಾ ಗುರುತಿಸಲಾಯಿತು.

2. ಆರೋಪಿಗಳ ಸ್ವ ಇಚ್ಛಾ ಹೇಳಿಕೆ ಮೇರೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಮಹಜರು ಮಾಡಿದೆನು. ಸದರಿ ಪಂಚನಾಮೆ ನಿಪಿ-22, ಸಾಕ್ಷಿ ಸಹಿ ನಿಪಿ-22(ಸಿ), ಫೋಟೋ ನಿಪಿ-23, 24, ನಕ್ಷೆ ನಿಪಿ-25, ಸಾಕ್ಷಿ ಸಹಿ ನಿಪಿ-25(ಸಿ) ಅಂತಾ ಗುರುತಿಸಲಾಯಿತು.

3. ನಂತರ ಅದೇ ದಿನ ಆರೋಪಿಗಳು ಬಳಸಿದ ಆಯುಧಗಳನ್ನು ನಿಪಿ–26 ರ ಮುಖಾಂತರ ಅಮಾನತ್ತುಪಡಿಸಿಕೊಂಡೆನು. ಸಾಕ್ಷಿ ಸಹಿ ನಿಪಿ–26(ಸಿ) ಅಂತಾ ಗುರುತಿಸಲಾಯಿತು. ಆರೋಪಿತರು ಬಳಸಿದ ಆಯುಧಗಳನ್ನು ಈಗಾಗಲೇ ಮು,ಮಾ–8 ಮತ್ತು 9 ಅಂತಾ ಗುರುತಿಸಲಾಗಿದೆ. ಫೋಟೋ ನಿಪಿ–27 ರಿಂದ 30, ನಕ್ಷೆ 31, ಸಾಕ್ಷಿ ಸಹಿ ನಿಪಿ–31(ಸಿ) ಅಂತಾ ಗುರುತಿಸಲಾಯಿತು.

4. ಅದೇ ದಿನ ಪಂಚರ ಸಮಕ್ಷಮ ನಿಪಿ–32 ರಂತೆ ಮಹಜರು ಮಾಡಿ ಆರೋಪಿತರು ತೋರಿಸಿದ ಲಾರಿಯನ್ನು ಜಪ್ತು ಮಾಡಿರುತ್ತೇನೆ. ಸಾಕ್ಷಿ ಸಹಿ ನಿಪಿ–32(ಸಿ), ಫೋಟೋ ನಿಪಿ–33 ರಿಂದ 36, ಕಚ್ಚಾ ನಕ್ಷೆ ನಿಪಿ–37, ಸಾಕ್ಷಿ ಸಹಿ ನಿಪಿ–37(ಸಿ) ಅಂತಾ ಗುರುತಿಸಲಾಯಿತು.

5. ಅದೇ ದಿನ 2 ನೇ ಆರೋಪಿ ತೋರಿಸಿದ ಸ್ಥಳದಲ್ಲಿ ನಿಪಿ–38 ರಂತೆ ಜಪ್ತು ಪಂಚನಾಮೆ ಮಾಡಿ ಮು.ಮಾ–10, 11 ನ್ನು ಜಪ್ತು ಮಾಡಿರುತ್ತೇನೆ. ಸಾಕ್ಷಿ ಸಹಿ ನಿಪಿ–38(ಸಿ), ಫೋಟೋ ನಿಪಿ–39 ರಿಂದ 42 , ಕಚ್ಚಾ ನಕ್ಷೆ ನಿಪಿ–43, ಸಾಕ್ಷಿ ಸಹಿ ನಿಪಿ–43(ಸಿ) ಅಂತಾ ಗುರುತಿಸಲಾಯಿತು.

6. ನಂತರ ಅದೇ ದಿನ 1 ನೇ ಆರೋಪಿ ಬಟ್ಟೆ ಸುಟ್ಟ ಜಾಗವನ್ನು ತೋರಿಸಿದ್ದು, ಸ್ಥಳದಲ್ಲಿ ನಿಪಿ–44 ರಂತೆ ಪಂಚನಾಮೆ ಮಾಡಿ, ಪಂಚನಾಮೆ ಮುಖಾಂತರ ಮು.ಮಾ–12,13 ನ್ನು ಜಪ್ತು ಮಾಡಿರುತ್ತೇನೆ. ಸಾಕ್ಷಿ ಸಹಿ ನಿಪಿ–44(ಸಿ), ಫೋಟೋ ನಿಪಿ–45 ರಿಂದ 48, ಕಚ್ಚಾ ನಕ್ಷೆ ನಿಪಿ–49, ಸಾಕ್ಷಿ ಸಹಿ ನಿಪಿ–49(ಸಿ) ಅಂತಾ ಗುರುತಿಸಲಾಯಿತು.

7. ಅದೇ ದಿನ ಚಾಸಾ–1 ರವರ ಮರು ಹೇಳಿಕೆ ಮತ್ತು ಚಾಸಾ–8 ರಿಂದ 10 ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ಜಪ್ತಾದ ಮಾಲನ್ನು ಮಾಲುಪಟ್ಟಿಗೆ ತಂದು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

8. ದಿನಾಂಕಃ19.03.2021 ರಂದು ಚಾಸಾ–11 ರಿಂದ 15 ರವರ ಹೇಳಿಕೆ ಮಾಡಿಕೊಂಡೆನು. ದಿನಾಂಕಃ20.03.2021 ರಂದು ಚಾಸಾ–16, 17, 29, 36 ರವರ ಹೇಳಿಕೆ ಮಾಡಿಕೊಂಡೆನು. ಚಾಸಾ–36 ರವರು ನಿಪಿ–60 ರಂತೆ 65(ಬಿ) ವರದಿ ಹಾಗೂ

ನಿಪಿ–61 ರಂತೆ ಸಿ.ಡಿ ನೀಡಿರುತ್ತಾರೆ. ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ದಾಖಲೆಗಳನ್ನು ಒದಗಿಸುವಂತೆ ಮನವಿಮಾಡಿಕೊಂಡೆನು.

9. ನಂತರ ನಿಪಿ–54, 55 ರಂತೆ ಮೃತರ ಪಿ.ಎಂ. ವರದಿ ಕಡತಕ್ಕೆ ಅಳವಡಿಸಿಕೊಂಡೆನು. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಆರ್.ಎಫ್ ಎಸ್ ಎಲ್ ಗೆ ಕಳಿಸಿಕೊಟ್ಟೆನು. ನಂತರ ವರ್ಗಾವಣೆಯಾದ್ದರಿಂದ ಕೇಸಿನ ತನಿಖೆಯನ್ನು ಚಾಸಾ–40 ರವರಿಗೆ ವರ್ಗಾಯಿಸಿದೆನು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

10. ನಾನು ತನಿಖೆಯನ್ನು ಕೈಗೊಂಡ ನಂತರ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ನನ್ನ ಮುಂದೆ ಆರೋಪಿಗಳನ್ನು ಸಾಯಂಕಾಲ 7.30 ಗಂಟೆಗೆ ತಂದು ಹಾಜರುಪಡಿಸಿದರು. ಅದಕ್ಕಿಂತ ಮೊದಲು ಆರೋಪಿಗಳನ್ನು ನೋಡಿಲ್ಲ. ಅರೆಸ್ಟ ಮೆಮೋವನ್ನು ಆರೋಪಿಗಳ ಸಂಬಂಧಿಕರಿಗೆ ನೀಡಿದ್ದೇವೆ. ನಿಪಿ–1 ದೂರಿನಲ್ಲಿ ಇಬ್ಬರೂ ಆರೋಪಿಗಳ ಹೆಸರು ಇಲ್ಲ. ನಿಪಿ–2 ರಲ್ಲಿ ನಮೂದಿಸಿರುವ ಸಮಯ ಟೈಪಿಂಗ್ ನಲ್ಲಿ ತಪ್ಪಾಗಿದೆ. ಚಾಸಾ–1 ರವರ ಹೇಳಿಕೆಯನ್ನು ಯಾವ ಸಮಯದಲ್ಲಿ ತೆಗೆದುಕೊಂಡೆ ನೆನಪಿಲ್ಲ.

11. ಆ ದಿನ ನಾನು ಮುಂಜಾನೆ 8.30 ಗಂಟೆಗೆ ಘಟನೆ ನಡೆದ ಸ್ಥಳಕ್ಕೆ ಹೋಗಿದ್ದೆ. ಬೆಳಿಗ್ಗೆ 8.30 ರೊಳಗೆ ನನಗೆ ಸುದ್ದಿ ಬಂದಿತ್ತು. ಚಾಸಾ–1 ರವರ ಮರು ವಿಚಾರಣೆಯಲ್ಲಿ ಕೇಳಿ ತಿಳಿದುಬಂತು ಅಂತಾ ಇದೆ. ಅದಕ್ಕಿಂತ ಮೊದಲು ಚಾಸಾ–1 ಅವರಿಗೆ ಯಾರಿಂದ ಕೊಲೆಯಾಗಿದೆ ಅಂತಾ ಗೊತ್ತಿರಲಿಲ್ಲ. ನಾನು ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರನಲ್ಲ. ಎಫ್ ಐ ಆರ್ ಹಾಕಿದ ನಂತರ ನನಗೆ ಗೊತ್ತಾಗಿದೆ. ನಿಪಿ–22 ಪಂಚನಾಮೆ ಮಾಡುವುದಕ್ಕಿಂತ ಮೊದಲು ಚಾಸಾ–38 ರವರು ಒಂದು ಪಂಚನಾಮೆ ಮಾಡಿದ್ದರು. ನಿಪಿ–4 ರಲ್ಲಿ 04 ರೂಂ ಗಳು ಇವೆ. ನಿಪಿ–25 ರಲ್ಲಿ 06 ರೂಂ ಗಳು ಇವೆ.

12. ಘಟನೆ ನಡೆದ ಸ್ಥಳದಲ್ಲಿ ಏನು ವಸ್ತುಗಳು ಸಿಗುತ್ತವೆ ಅವುಗಳನ್ನು ಜಪ್ತು ಮಾಡುತ್ತೇವೆ. ನಿಪಿ–22 ರ ಮುಖಾಂತರ ಯಾವುದೇ ವಸ್ತುವನ್ನು ಜಪ್ತು ಮಾಡಿಲ್ಲ. ವೀಲ್ ಚೇರ್, 3 ಪ್ಲಾಸ್ಟಿಕ್ ಚೇರ್, ಚಿಕ್ಕ ಟೇಬಲ್ ಜಪ್ತು ಮಾಡಿಲ್ಲ. ನಿಪಿ–24 ಪೋಟೋದಲ್ಲಿ ವೀಲ್ ಚೇರ್, 3 ಪ್ಲಾಸ್ಟಿಕ್ ಚೇರ್, ಚಿಕ್ಕ ಟೇಬಲ್ ಕಂಡು ಬರುವುದಿಲ್ಲ. ರೂಮಿನ ಅಳತೆ 15x15

ಇದೆ. ಯಾವ ಆಸ್ತಿ ನಂಬರ್ ನಲ್ಲಿ ಘಟನೆ ನಡೆದಿದೆ ಅಂತಾ ನಿಪಿ–22 ಮಾಡುವ ಸಮಯಕ್ಕೆ ಬರೆದಿಲ್ಲ.

13. ನಿಪಿ–30 ರಲ್ಲಿ ಎರಡೂ ಆಯುಧಗಳು ನನ್ನ ಕೈಯಲ್ಲೇ ಇದೆ. ಆರೋಪಿಗಳು ಆಯುಧಗಳನ್ನು ಎಲ್ಲಿಂದ ತೆಗೆದರು ಎನ್ನುವ ಬಗ್ಗೆ ಪೋಟೋ ಇಲ್ಲ. ಆರೋಪಿಗಳು ಆಯುಧಗಳನ್ನು ತೆಗೆದುಕೊಟ್ಟಿದ್ದರೆ ಪೋಟೋ ಹಾಜರುಪಡಿಸಲು ತೊಂದರೆ ಇರಲಿಲ್ಲ. ಎರಡೂ ಆಯುಧಗಳನ್ನು ಆರೋಪಿಗಳು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ–31 ರಲ್ಲಿ ತೋರಿಸಿರುವ ಜಾಗ ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ಸರಿಯಲ್ಲ. ಅದೇ ದಿನ ಆಯುಧಗಳ ಬಗ್ಗೆ ಪಿ.ಎಫ್ ನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಆ ದಿನ ಸಮಯವಾದ್ದರಿಂದ ನೀಡಿಲ್ಲ.

14. ತಕ್ಷಣ ಎಫ್ ಐ ಆರ್ ನ್ನು ನ್ಯಾಯಾಧೀಶರಿಗೆ ತಲುಪಿಸುತ್ತೇವೆ ಎಂದರೆ ಸರಿ. ಅದೇ ದಿನ ಪಿ.ಎಫ್ ಕೊಡಲು ತೊಂದರೆ ಇರಲಿಲ್ಲ. ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲು ಹಾಕಿದ ಪೋಟೋಗಳು ಇಲ್ಲ. ಪೋಟೋ ತೆಗೆಯಲು ತೊಂದರೆ ಇರಲಿಲ್ಲ. ನಿಪಿ–34 ರಲ್ಲಿ ನಾನೇ ಆರೋಪಿಗಳನ್ನು ಕರೆದುಕೊಂಡು ಹೋಗುವುದು ಕಾಣುತ್ತದೆ ಎಂದರೆ ಸರಿ. ಪೋಟೋಗಳನ್ನು ಮಹಜರಿನ ಸಮಯದಲ್ಲಿ ತೆಗೆಯಲಾಗಿದೆ. ಲಾರಿ ಯಾರಿಗೆ ಸಂಬಂಧಪಟ್ಟಿದ್ದು ಅಂತಾ ದಾಖಲೆಗಳನ್ನು ಕೊಟ್ಟಿಲ್ಲ.

15. ನಿಪಿ–42 ರಲ್ಲಿ ನಾನೇ ಬಟ್ಟೆ ತೆಗೆದುಕೊಂಡಿದ್ದೇನೆ. ಅವುಗಳನ್ನು ಜಪ್ತು ಮಾಡಿ, ಸೀಲು ಮಾಡಿದ ಪೋಟೋಗಳು ಇಲ್ಲ. ಅಲ್ಲಿ ಜಪ್ತು ಮಾಡಿ ಸೀಲು ಮಾಡಿದ ಪೋಟೋ ತೆಗೆಯಲು ಯಾವುದೇ ತೊಂದರೆ ಇರಲಿಲ್ಲ. ಉದ್ದೇಶಪೂರ್ವಕವಾಗಿ ತಯಾರುಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ–45, 46 ರಲ್ಲಿ ಆರೋಪಿತರೇ ಸ್ಥಳವನ್ನು ತೋರಿಸಿದರು ಎನ್ನುವ ಬಗ್ಗೆ ಪೋಟೋಗಳು ಇಲ್ಲ. ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ನಮಗೆ ಅನುಕೂಲವಾಗುವಂತೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

16. ದಿನಾಂಕಃ19.03.2021 ರಂದು ದೀಪಕ್ ನ ವಯಸ್ಸು 24 ಅಂತಾ ತೋರಿಸಿದ್ದೇವೆ. ನನಗೆ ಕೊಲೆಯಾದ ವ್ಯಕ್ತಿ 20 ವರ್ಷಗಳಿಂದ ಗೊತ್ತು ಅಂತಾ ದಾಖಲಾಗಿದೆ. ನಿಪಿ–22 ರಲ್ಲಿ ಆಸ್ತಿ ನಂಬರ್ ಇಲ್ಲ. ಜಪ್ತಾದ ವಸ್ತುಗಳನ್ನು ತಕ್ಷಣ ಆರ್ ಎಫ್ ಎಸ್ ಗೆ ಕಳಿಸಲು

ತೊಂದರೆ ಇರಲಿಲ್ಲ. ಆರೋಪಿಗಳು ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ–22 ರಿಂದ 49 ನ್ನು ಈ ಕೇಸಿಗೆ ಅನುಕೂಲವಾಗುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ.

17. ಚಾಸಾ–1 ರವರ ಮೇಲೆ ಶಹರ ಠಾಣೆಯಲ್ಲಿ ಒಂದು ಕೇಸು ಆಗಿತ್ತು ಎಂದರೆ ಸರಿ. ತೀರಿಕೊಂಡ ನಿಂಗಪ್ಪನ ಮೇಲೂ ಸಹ ಒಂದು ಕೇಸು ಆಗಿತ್ತು ಎಂದರೆ ಸರಿ. ಮೃತ ನಿಂಗಪ್ಪನಿಗೆ ರಾಣೇಬೆನ್ನೂರಿನ ಕೋರ್ಟಿನಲ್ಲಿ ಜೀವಾವಧಿ ಶಿಕ್ಷೆ ಆಗಿತ್ತು ಎಂದರೆ ಸರಿ. ನಿಂಗಪ್ಪನಿಗೆ ಬಹಳಷ್ಟು ಜನ ವಿರೋಧಿಗಳು ಇದ್ದರು ಎಂದು ನನ್ನ ತನಿಖೆಯಲ್ಲಿ ಕಂಡು ಬಂತು ಎಂದರೆ ಸರಿ. ಆರೋಪಿಗಳು ಬಾಡಿಗೆ ಪಡೆದ ಬಗ್ಗೆ ಮಳೀಮಠ ಕಡೆಯಿಂದ ಬಾಡಿಗೆ ಕರಾರು ಪಡೆದಿಲ್ಲ.

18. ಸಿಡಿಆರ್ ತೆಗೆದುಕೊಂಡಿದ್ದೇವೆ, ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ಚಾಸಾ–1 ರಾಣೇಬೆನ್ನೂರಿಗೆ ಹೋಗುತ್ತಿದ್ದ ಬಗ್ಗೆ ಬಸ್ ಟಿಕೆಟ್ ಪಡೆದುಕೊಂಡಿಲ್ಲ. ತೀರಿಕೊಂಡ ಇಬ್ಬರು ವ್ಯಕ್ತಿಗಳು ಹಾವೇರಿಯ ನಿವಾಸಿಗಳು ಯತ್ತಿನಹಳ್ಳಿಯವರಲ್ಲ ಎಂದರೆ ಸರಿ. ಯತ್ತಿನಹಳ್ಳಿ ಗ್ರಾಮದ ಚೆನ್ನಮ್ಮ ಟ್ರೇಡರ್ಸ ರವರ ಹೇಳಿಕೆ ಮಾಡಿಕೊಂಡಿಲ್ಲ. ಎಷ್ಟು ಗಂಟೆಗೆ ತಹಶೀಲ್ದಾರರಿಗೆ ಪಂಚರನ್ನು ಕಳಿಸಿಕೊಡಿ ಅಂತಾ ಕೇಳಲಾಗಿದೆ ಎಂದು ಹೇಳಲಾಗುವುದಿಲ್ಲ.

19. 2 ನೇ ಆರೋಪಿ ಹಾವೇರಿಯವನಲ್ಲ, ಯತ್ತಿನಹಳ್ಳಿಯವನಲ್ಲ. ಮುದ್ದೆ ಮಾಲಿನ ಮೇಲೆ ರಕ್ತದ ಕಲೆಗಳು ಇಲ್ಲ. ಕೋರ್ಟಿನ ಮುಂದೆ ಇರುವ ಮುದ್ದೆ ಮಾಲುಗಳಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ಕಳಿಸಿ ವೈದ್ಯರಿಂದ ಅಭಿಪ್ರಾಯ ಪಡೆದಿಲ್ಲ. ಎಲ್ಲಾ ಪಂಚನಾಮೆಗಳಿಗೆ ಸಹಿಯನ್ನು ಠಾಣೆಯಲ್ಲೇ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸೀಲನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ.

20. ವೀರೇಶ್ ಪೋಟೋ ಸ್ಟುಡಿಯೋದವರ ಹೇಳಿಕೆ ಮಾಡಿಕೊಂಡಿಲ್ಲ. ಜಪ್ತು ಮಾಡಿರುವ ಲಾರಿ ಆರೋಪಿತರಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಿಪಿ–44 ರ ಮುಖಾಂತರ ಬೂದಿ ಮತ್ತು ಸುಟ್ಟ ಕಟ್ಟಿಗೆಯನ್ನು ಜಪ್ತು ಮಾಡಿಲ್ಲ. ಹಣಕಾಸಿನ ವ್ಯವಹಾರ ಇದ್ದ

ಬಗ್ಗೆ ದಾಖಲೆ ಪಡೆದುಕೊಂಡಿಲ್ಲ. ಮೃತ ವ್ಯಕ್ತಿ ಬಹಳಷ್ಟು ಕ್ರಿಮಿನಲ್ ಕೇಸಿನಲ್ಲಿ ಭಾಗಿಯಾದ್ದರಿಂದ ಆತನಿಗೆ ಬಹಳಷ್ಟು ವೈರಿಗಳು ಇದ್ದರು ಎಂದರೆ ಸರಿಯಲ್ಲ. ಆರೋಪಿಗಳು ಕೃತ್ಯದಲ್ಲಿ ಭಾಗಿಯಾದ ಬಗ್ಗೆ ಯಾವುದೇ ಸಾಕ್ಷ್ಯಗಳು ಇಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮೇಲೆ ದೂರು ದಾಖಲಾದ ಬಗ್ಗೆ ವರದಿ ಇಲ್ಲ. ಯಾರೋ ಮಾಡಿರುವ ಕೃತ್ಯವನ್ನು ಆರೋಪಿಗಳ ಮೇಲೆ ಹಾಕಿದ್ದೇವೆಂದರೆ ಸರಿಯಲ್ಲ.

21. ನಿಪಿ–22 ಪಂಚನಾಮೆಯಲ್ಲಿ ರಕ್ತ ಇದ್ದ ಬಗ್ಗೆ ನಮೂದು ಮಾಡಿಲ್ಲ. ಗುತ್ತೆವ್ವ ಮತ್ತು ಕಟ್ಟೀಮನಿಯವರ ಹೇಳಿಕೆಯಲ್ಲಿ ಕೊಲೆಯಾಗಿರುವ ವಿಷಯ ತಮ್ಮಿಂದ ಮತ್ತು ಅವರಿಂದ ಕೇಳಿ ಗೊತ್ತಾಗಿರುತ್ತದೆ ಎಂದು ಇದೆ ಎಂದರೆ ಸರಿ. ನಿಪಿ–11, 15 ನ್ನು ನಾನು ಪರಿಶೀಲನೆ ಮಾಡಿದ್ದೇನೆ. ಅಲ್ಲಿ ಹಣಕಾಸಿನ ವ್ಯವಹಾರ ಇದ್ದ ಬಗ್ಗೆ ಬರೆದಿಲ್ಲ. ಬೆಲ್ಟ ಎಲ್ಲಿಂದ ತಂದಿದ್ದು ಅನ್ನುವುದಕ್ಕೆ ಸಾಕ್ಷಿ ಕಲೆಹಾಕಿಲ್ಲ. ಆರೋಪಿತರ ವಿರುದ್ಧ ಸುಳ್ಳು ಕಥೆ ಕಟ್ಟಿ , ಸುಳ್ಳು ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ.

22. ಆರೋಪಿಗಳ ಪೋಟೋವನ್ನು ನಮ್ಮ ಸಿಬ್ಬಂದಿಯವರು ತೆಗೆದಿರುತ್ತಾರೆ. ಯಾವತ್ತು ಆರೋಪಿಗಳ ಪೋಟೋ ತೆಗೆದಿರುತ್ತಾರೆ ಗೊತ್ತಿಲ್ಲ. ತನಿಖೆಗಾಗಿ ಎರಡೂ ಪೋಟೋಗಳನ್ನು ಪರಿಶೀಲನೆ ಮಾಡಿದ್ದೇನೆ. ಕೈದಿಗಳ ಶೋಧನೆ ರಿಜಿಸ್ಟರ್ ನಲ್ಲಿ ನನ್ನ ಸಹಿ ಇದೆ. 2 ನೇ ಆರೋಪಿ ನೀಲಿ ಬಣ್ಣದ ಚುಕ್ಕಿ ಡಿಸೈನ್ ನ ಅರ್ಧ ತೋಳಿನ ಟಿ ಶರ್ಟ ಹಾಗೂ ಕಪ್ಪು ಬಣ್ಣದ ಹಾಫ್ ಪ್ಯಾಂಟ್ ಧರಿಸಿರುತ್ತಾನೆ ಎಂದು ಇದೆ. ಪೋಟೋದಲ್ಲಿ ಈ ರೀತಿ ಇಲ್ಲ.

23. ಯತ್ತಿನಹಳ್ಳಿ ಗ್ರಾಮಕ್ಕೆ ಹೋಗಿಲ್ಲ, ಆರೋಪಿಗಳು ಯಾವುದೇ ಸ್ಥಳ ತೋರಿಸಿಲ್ಲ, ಪ್ರಕರಣಕ್ಕೆ ಅನುಕೂಲವಾಗುವಂತೆ ಹೇಳಿಕೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಎಲ್ಲಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.